**ಅ.ದಾವಾ ನಂ. 97/2019** **ಪಿ.ಡಬ್ಲ್ಯೂ-1**

**ದಿನಾಂಕ 30/11/2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಹೆಚ್.ಆರ್.ಜೆ. ವಕೀಲರಿಂದ**

ನನ್ನ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳನ್ನು ನಾನು ತಿಳಿದುಕೊಂಡಿದ್ದೇನೆ. ಈ ದಾವೆ ಪ್ರತಿವಾದಿ ನನಗೆ ಹಣ ಕೊಡಬೇಕಾಗಿದ್ದರಿಂದ ಸಲ್ಲಿಸಿರುತ್ತೇನೆ. ಪ್ರತಿವಾದಿಗೆ ಇಬ್ಬರು ಹೆಣ್ಣುಮಕ್ಕಳು ಇರಬಹುದು, ಒಬ್ಬ ಗಂಡು ಮಗ ಇರುತ್ತಾರೆ. ಪ್ರತಿವಾದಿ ತನಗೆ ಹಣ ಅವಶ್ಯಕತೆ ಇರುವುದಾಗಿ ದಿಃ 10.04.2017 ಕ್ಕೆ ನನ್ನ ಬಳಿ ಬಂದಿರುತ್ತಾರೆ. ನನ್ನದು ಕಟಿಂಗ್ ಶಾಪ್ ಒಂದೇ ಇರುತ್ತದೆ. ದಿಃ 10.04.2017 ರಂದು ನನ್ನ ಬಳಿ ಹಣ ಕೇಳಲು ಪ್ರತಿವಾದಿ ಒಬ್ಬರೇ ಬಂದಿರುತ್ತಾರೆ. ಪ್ರತಿವಾದಿ ತನಗೆ ಕೈಸಾಲ ಇರುವುದಾಗಿಯೂ ಹಾಗೂ ಹಣದ ಖರ್ಚಿರುವುದರಿಂದ ಸಾಲ ಬೇಕೆಂದು ನನ್ನನ್ನು ಕೇಳಿರುತ್ತಾರೆ. ಹಣವನ್ನು ನಾನು ಪ್ರತಿವಾದಿಗೆ ಅದೇ ದಿನ ನೀಡಿರುತ್ತೇನೆ.

2. ನಾನು ನನ್ನ ಕಟಿಂಗ್ ಶಾಪ್ ವ್ಯಾಪಾರದಿಂದ ಬಂದಿದ್ದಂತಹ 1 ಲಕ್ಷ ರೂ. ಹಣವನ್ನು ಕೂಡಿಟ್ಟುಕೊಂಡಿದ್ದು ಪ್ರತಿವಾದಿಗೆ ನೀಡಿದ್ದೇನೆ. ಹಣವನ್ನು ನಾನು ಮನೆಯಲ್ಲಿ ಇಟ್ಟಿದ್ದೆ. ನನಗೆ ಪ್ರತಿದಿನ ಸುಮಾರು 700 ರಿಂದ 800 ರೂ. ವ್ಯಾಪಾರ ಆಗುತ್ತದೆ. ಭಾನುವಾರ ಹಾಗೂ ಹಬ್ಬ ಹರಿದಿನಗಳಂದು ಹೆಚ್ಚಿಗೆ ಆಗುತ್ತದೆ. ನನ್ನ ಮನೆಯಲ್ಲಿ ನಾನು ಮತ್ತು ನನ್ನ ತಾಯಿ ಇರುತ್ತೇವೆ. ಈಗ ಒಂದು ವರ್ಷದಿಂದ ನನಗೆ ಮದುವೆಯಾಗಿ ನನ್ನ ಹೆಂಡತಿ ಮತ್ತು 5 ತಿಂಗಳ ಮಗು ಇರುತ್ತದೆ. ನನಗೆ ಯಾವುದೇ ಜಮೀನು ಇರುವುದಿಲ್ಲ. ನನ್ನ ಕಟಿಂಗ್ ಶಾಪ್ ನ ಆದಾಯದಿಂದಲೇ ಮನೆಯ ಖರ್ಚುಗಳು ಆಗಬೇಕಾಗುತ್ತದೆ ಎಂದರೆ ಸರಿ. ನನ್ನ ಬಳಿ ಬಿ.ಪಿ.ಎಲ್ ಕಾರ್ಡ್ ಇರುತ್ತದೆ. ಬಿ.ಪಿ.ಎಲ್ ಕಾರ್ಡ್ ಅಡಿ ಒಬ್ಬರಿಗೆ 7 ಕೆ.ಜಿ ಅಕ್ಕಿ ಬರುತ್ತದೆ. ಬಿ.ಪಿ.ಎಲ್ ಕಾರ್ಡ್ ಇರುವುದಕ್ಕೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ.

3. ಹಣ ನೀಡಬೇಕಾದರೆ ಇಬ್ಬರು ಸಾಕ್ಷಿಗಳಿದ್ದರು. ಮನೆಯಲ್ಲಿ 1 ಲಕ್ಷ ಕೂಡಿಡುವುದು ಕಾನೂನು ಬಾಹಿರವೆಂದು ಸೂಚಿಸಲು ಅದು ಕಾನೂನು ಬಾಹಿರ ಇರಬಹುದು ಆದರೆ ನಾನು ಮನೆ ಕಟ್ಟಲು ಕೂಡಿಟ್ಟಿದ್ದ ಹಣ ಎಂದು. ನಾನು ಪ್ರತಿವಾದಿಗೆ 10 ಸಾವಿರ ರೂ. ಕಟ್ಟಿನ 10 ಕಟ್ಟುಗಳನ್ನು ನೀಡಿದ್ದು, ಸದರಿ ನೋಟುಗಳು 100 ರೂ. ಮುಖಬೆಲೆಯ ನೋಟುಗಳಾಗಿದ್ದವು. 10 ಕಟ್ಟುಗಳನ್ನು ನಾನು ಯಾವುದೇ ಬ್ಯಾಂಕಿನಿಂದ ತಂದಿದ್ದಲ್ಲ. ನಿಮಗೆ ದಿನಕ್ಕೆ 700 ರಿಂದ 800 ರೂ. ಆದಾಯ ಎಂದು ಹೇಳಿದ್ದು ನೂರು ರೂ. ಮುಖಬೆಲೆಯ

ನೋಟುಗಳನ್ನು ಕಟ್ಟಿ ಹಿಡುತ್ತಿದ್ದಿರೆ ಎಂಬ ಪ್ರಶ್ನೆಗೆ ಸಾಕ್ಷಿ ಹೇಳುತ್ತಾರೆ ನೂರು ನೂರು ರೂಪಾಯಿ ಸಾವಿರ ಆದಾಗ ಒಂದು ಕಟ್ಟಾಗಿ ಇಡುತ್ತಿದ್ದೆ.

4. ಹಣ ನೀಡಬೇಕಾದರೆ ವೈ.ಡಿ.ಕಾಡಯ್ಯ ಮತ್ತು ರಾಜಣ್ಣ ರವರು ಸಾಕ್ಷಿಗಳಾಗಿ ಇದ್ದರು. ಸದರಿ ಸಾಕ್ಷಿಗಳ ತಂದೆಯ ಹೆಸರು ನನಗೆ ಗೊತ್ತಿಲ್ಲ. ಸಾಲ ನೀಡಿದ ನಂತರ ಪ್ರತಿವಾದಿ ನನಗೆ ಆನ್ ಡಿಮ್ಯಾಂಡ್ ಫ್ರಾಮಿಸರಿ ನೋಟನ್ನು ನೀಡಿರುತ್ತಾರೆ. ಪ್ರತಿವಾದಿಗೆ ನಾನು 1 ವರೆ ಪರ್ಸೆಂಟ್ ನಂತೆ ಬಡ್ಡಿಗೆ ನೀಡಿರುತ್ತೇನೆ. ನಾನು ಯಾವುದೇ ಲೇವಾದೇವಿ ವ್ಯವಹಾರ ಮಾಡುವುದಿಲ್ಲ. ದಿಃ 10.04.2017 ರಂದು ಹಣ ನೀಡಿದ ನಂತರ ಪ್ರತಿವಾದಿ ನಿ.ಪಿ 1 ಕ್ಕೆ ಸಹಿ ಹಾಕಿ ಅದರ ಮೇಲೆ ಹೆಬ್ಬೆಟ್ಟನ್ನು ಹಾಕಿ ನೀಡಿರುತ್ತಾರೆ. ನಿ.ಪಿ 1 ಕ್ಕೆ ಹೆಬ್ಬೆಟ್ಟು ಮತ್ತು ಸಹಿಯನ್ನು ಒಂದೇ ಸಾರಿ ಪ್ರತಿವಾದಿಯ ಕೈಯಲ್ಲಿ ಮಾಡಿಸಿರುತ್ತೇನೆ. ನಿ.ಪಿ 1 ಕ್ಕೆ ಸಹಿ ಮತ್ತು ಹೆಬ್ಬೆಟ್ಟು ಹಾಕುವಾಗ ಖಾಲಿ ಇತ್ತು ಎಂದರೆ ಸರಿಯಲ್ಲ. ಐ.ಎಲ್ ಸುರೇಶ್ ವಕೀಲರವರು ಸದರಿ ನಿ.ಪಿ 1 ರಲ್ಲಿ ಬೆರಳಚ್ಚು ಮಾಡಿಸಿರುತ್ತಾರೆ. ಐ.ಎಲ್.ಸುರೇಶ್ ರವರು ಹೊ.ನ.ಪುರ ನ್ಯಾಯಾಲಯದ ಬಳಿ ಇರುವ ಬೆರಳಚ್ಚುಗಾರರ ಬಳಿ ಬರೆಸಿರುತ್ತಾರೆ. ಐ.ಎಲ್.ಸುರೇಶ್ ರವರು ಬೆರಳಚ್ಚುಗಾರರ ಕೈಯಲ್ಲಿ ಬೆರಳಚ್ಚು ಮಾಡಿಸಿರುತ್ತಾರೆ. ಬೆರಳಚ್ಚು ಮಾಡಿದ ವ್ಯಕ್ತಿಯ ಹೆಸರು ನನಗೆ ಈಗ ಹೇಳಲಾಗುವುದಿಲ್ಲ. ಬೆರಳಚ್ಚು ಮಾಡಿದ ಸ್ಥಳದಲ್ಲೇ ಸಾಕ್ಷಿಗಳ ಸಮ್ಮುಖದಲ್ಲೇ ನಾನು ಹಣ ನೀಡಿದ್ದೇನೆ. ಪ್ರತಿವಾದಿ ಆನ್ ಡಿಮ್ಯಾಂಡ್ ಫ್ರಾಮಿಸರಿ ನೋಟ್ ಗೆ ಮಾತ್ರ ಸಹಿ ಹಾಕಿದರು, ಹಣ ಸಂದಾಯ ರಶೀದಿಗೆ ಸಹಿ ಹಾಕಲಿಲ್ಲ.

5. ಆನ್ ಡಿಮ್ಯಾಂಡ್ ಪ್ರೋನೋಟ್ ಗೆ ಇಬ್ಬರು ಸಾಕ್ಷಿಗಳ ಸಹಿ ಹಾಕಿದ್ದಾರೆ. ಇಬ್ಬರೂ ಸಾಕ್ಷಿಗಳು ಆಂಗ್ಲ ಭಾಷೆಯಲ್ಲಿ ಸಹಿ ಹಾಕಿರುತ್ತಾರೆ. ಇಬ್ಬರು ಸಾಕ್ಷಿಗಳು ತಮ್ಮ ತಂದೆಯ ಹೆಸರುಗಳನ್ನು ಸಹಿಗಳ ಜೊತೆ ಸೇರಿ ಬರೆದಿರುವುದಿಲ್ಲ. ಅವರ ಊರುಗಳ ಹೆಸರನ್ನು ಬರೆದಿರುತ್ತಾರೆ. ರಾಜಣ್ಣ ಅಂಬೇಡ್ಕರ್ ನಗರ ಎಂದು, ಕಾಡಯ್ಯ ಹೊಳೆನರಸೀಪುರ ಎಂದು ನಮೂದು ಮಾಡಿರುತ್ತಾರೆ. ಮೊದಲನೇಯದಾಗಿ ಆನ್ ಡಿಮ್ಯಾಂಡ್ ಫ್ರಾಮಿಸರಿ ನೋಟ್ ಗೆ ಕಾಡಯ್ಯ ರವರು ಸಹಿ ಹಾಕಿರುತ್ತಾರೆ. ಆನ್ ಡಿಮ್ಯಾಂಡ್ ಫ್ರಾಮಿಸರಿ ನೋಟ್ ಗೆ ಡಿಕ್ಲೆಮ್ ದಾರರಾಗಿ ವಕೀಲರಾದ ಐ.ಎಲ್.ಸುರೇಶ್ ರವರು ಸಹಿ ಹಾಕಿರುತ್ತಾರೆ. ಐ.ಎಲ್ ಸುರೇಶ್ ರವರು ಡಿಕ್ಲೆಮ್ ದಾರರಾಗಿ ಸಹಿ ಹಾಕಬೇಕಾದರೆ ತಾವು ಡಿಕ್ಲೇಮ್ ಮಾಡಿದ ದಿನವನ್ನು ನಮೂದು ಮಾಡಿದ್ದಾರೋ ಇಲ್ಲವೋ ನಾನು ಅಷ್ಟಾಗಿ ಗಮನಿಸಿಲ್ಲ.

6. ನಾನು ಪ್ರತಿವಾದಿಯನ್ನು ಹಣವನ್ನು ಮರುಪಾವತಿ ಮಾಡಬೇಕೆಂದು ಕೇಳಿಕೊಂಡಿರುತ್ತೇನೆ. ಆನ್ ಡಿಮ್ಯಾಂಡ್ ಫ್ರಾಮಿಸರಿ ನೋಟ್ ನಲ್ಲಿ ಪ್ರತಿವಾದಿಯ ಊರು , ಹೆಸರು ಮತ್ತು ವಿಳಾಸ ಬರೆಯಲಾಗಿದೆ. ಪ್ರತಿವಾದಿಯ ತಂದೆಯ ಹೆಸರು ಸೀರಯ್ಯ. ಆನ್ ಡಿಮ್ಯಾಂಡ್ ಫ್ರಾಮಿಸರಿ ನೋಟ್ ನಲ್ಲಿ ಪ್ರತಿವಾದಿ ನಿವೃತ್ತ

ಶಿಕ್ಷಕರೆಂದು ಬರೆಸಿಲ್ಲ. ಸಾಕ್ಷಿಗೆ ತಿಳುವಳಿಕೆ ಪತ್ರದ ದಿನಾಂಕ ಕೇಳಲಾಗಿ ಸಾಕ್ಷಿ ತನ್ನ ಕೈ ಮೇಲೆ ಬರೆದುಕೊಂಡಿರುವ ಮಾಹಿತಿಯನ್ನು ನೋಡಿಕೊಂಡು ಮೊದಲಿಗೆ ದಿಃ 26.04.2019 ಎಂದು ಹೇಳಿದ್ದು ತದನಂತರ ತನ್ನ ಕೈಮೇಲೆ ನೋಡಿಕೊಂಡು 26.02.2019 ಎಂದು ಹೇಳಿರುತ್ತಾರೆ. ಸಾಕ್ಷಿಗೆ ನಿಮ್ಮ ಕೈಮೇಲೆ ಸಂಪೂರ್ಣ ವ್ಯವಹಾರದ ಮಾಹಿತಿಯನ್ನು ಕೈ ಮೇಲೆ ಬರೆದುಕೊಂಡಿದ್ದೀರಿ ಎಂದು ಸೂಚಿಸಲು ಸಾಕ್ಷಿ ಬರೆದುಕೊಂಡಿಲ್ಲ ಎಂದು ಹೇಳುತ್ತಾರೆ.

ಮುಂದುವರಿದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.

**ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸ.ಇ.**

**ಜೆಎಂಎಫ್‌ಸಿ., ಹೊಳೆನರಸೀಪುರ.**